ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು,
ದಿನಾಂಕ 13.01.2022

ಸಂಖ್ಯೆ:ಜಿಎಲ್5/234(1)/2019-20

## ಸು ತ್ತೋ ಲೆ

ವಿಷಯ: 73ನೇ ಗಣರಾಜ್ಯೋತ್ಸವ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸುವ ಬಗ್ಗೆ.
ಉಲ್ಲೇಖ: ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ, ಮಾ.ಗಂ., ಮೈಸೂರು ಇವರ ಪತ್ರ ಸಂ.ವಿಕ್ಷೇಪಾ2/36/1057/19-20 ದಿನಾಂಕ 10-01-2022

-:-

ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಮಂಡಳಿ ಸದಸ್ಯರು ಹಾಗೂ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು/ ನಿರ್ದೇಶಕರು/ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರು/ ಬಟವಾಡೆ ಅಧಿಕಾರಿಗಳು/ ಅಧ್ಯಾಪಕರು/ ಅಧ್ಯಾಪಕೇತರರು/ ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ. ದಿನಾಂಕ **26.01.2022**ರಂದು **"73ನೇ ಗಣರಾಜ್ಯೋತ್ಸವ ದಿನಾಚರಣೆ"** ಸಮಾರಂಭದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂಭಾಗದಲ್ಲಿ ಬೆಳಿಗ್ಗೆ **7.30** ಘಂಟೆಗೆ ಸನ್ಮಾನ್ಯ ಕುಲಪತಿಯವರಾದ ಪ್ರೊ. ಜಿ.ಹೇಮಂತ್‌ಕುಮಾರ್ ಅವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ. ಈ ಸಮಾರಂಭಕ್ಕೆ ತಾವೆಲ್ಲರೂ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬೇಕೆಂದು ಈ ಮೂಲಕ ಕೋರಲಾಗಿದೆ.

ಮತ್ತು ಕೋವಿಡ್-19 (ಕೊರೊನ ವೈರಣು) ಸಾಂಕ್ರಮಿಕ ರೋಗ ಹರಡದಿರುವಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕುಲಸಚಿವ

ಇವರಿಗೆ

1. ಸಿಂಡಿಕೇಟ್/ಶಿಕ್ಷಣ ಮಂಡಳಿ ಸದಸ್ಯರುಗಳು, ಮೈವಿವಿ, ಮೈಸೂರು
2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈವಿವಿ, ಮೈಸೂರು
3. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ನಿರ್ದೇಶಕರು, ಮೈವಿವಿ, ಮೈಸೂರು
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಹಾಸನ/ಮಂಡ್ಯ ಮತ್ತು ಚಾಮರಾಜನಗರ
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ, ಮಾನಸಗಂಗೋತ್ರಿ, ಮೈಸೂರು
6. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರು, ಮೈವಿವಿ, ಮೈಸೂರು
7. ಸಂಯೋಜನಾಧಿಕಾರಿಗಳು, ಕೆಸೆಟ್/ನೆಟ್ ಪರೀಕ್ಷಾಕೇಂದ್ರ, ಪರೀಕ್ಷಾ ಭವನ, ಮೈವಿವಿ, ಮೈಸೂರು
8. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಮೈವಿವಿ,ಮೈಸೂರು
9. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು
10. ಕುಲಪತಿ/ಕುಲಸಚಿವರ ಆಪ್ತಸಹಾಯಕರು, ಮೈವಿವಿ, ಮೈಸೂರು

(1–10:) ಈ ಸುತ್ತೋಲೆಯನ್ನು ಎಲ್ಲಾ ಬೋಧಕ/ ಬೋಧಕೇತರ ಸಿಬ್ಬಂದಿಯವರ ಗಮನಕ್ಕೆ ತರಲು ಕೋರಿದೆ.

11 ಕಛೇರಿ ಪ್ರತಿ.

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು – 570 005

website : www.uni-mysore.ac.in

**ವಿಷಯ:** 73ನೇ ಗಣರಾಜ್ಯೋತ್ಸವ ದಿನಾಚರಣೆಯ ಖರ್ಚು ವೆಚ್ಚಗಳನ್ನು ಪಾವತಿಸುವ ಬಗ್ಗೆ.

**ಪ್ರಸ್ತಾವನೆ:** 2022ರ ಜನವರಿ 26ರಂದು ವಿಶ್ವವಿದ್ಯಾನಿಲಯದ ವತಿಯಿಂದ 73ನೇ ಗಣರಾಜ್ಯೋತ್ಸವ ದಿನಾಚರಣೆಯ ಆಚರಣೆಗೆ ಖರ್ಚು ವೆಚ್ಚವಾಗಿರುವ ಮೊತ್ತ ರೂ: 94,453=00ಗಳನ್ನು ಮಂಜೂರು ಮಾಡಿ, ಸಂಬಂಧಿಸಿದವರಿಗೆ ಪಾವತಿಸುವ ಪ್ರಸ್ತಾವನೆಯನ್ನು ಮಾನ್ಯ ಕುಲಪತಿಗಳು ಕಡತದಲ್ಲಿ ಒಪ್ಪಿರುವುದರಿಂದ ಈ ಆದೇಶ.

******

**ವಿ.ವಿ. ಆದೇಶ ಸಂಖ್ಯೆ: ವಿಕ್ಷೇಪಾ.2/36/1319/2019-20 ದಿನಾಂಕ: 07-03-2022**

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, 2022ರ ಜನವರಿ 26ರಂದು 73ನೇ ಗಣರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಈ ಕೆಳಗೆ ನಮೂದಿಸಿರುವ ಕ್ರಮ ಸಂಖ್ಯೆ: 01 ರಿಂದ 11ರಲ್ಲಿ ಖರ್ಚಾಗಿರುವ ಬಾಬ್ತು ರೂ: 94,453/- (ತೊಂಬತ್ತಾಲ್ಕು ಸಾವಿರದ ನಾನೂರ ಐವತ್ಮೂರು ರೂಪಾಯಿಗಳು ಮಾತ್ರ) ಗಳನ್ನು ಸಂಬಂಧಿಸಿದವರಿಗೆ ಪಾವತಿಸಲು ಮಂಜೂರಾತಿ ನೀಡಿದೆ. ಸದರಿ ವೆಚ್ಚಕ್ಕೆ ಸಂಬಂಧಿಸಿದಂತೆ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರು ಡಿ.ಸಿ. ಪೇಯಬಲ್ ಹುಂಡಿಯ ಮೂಲಕ ಪಡೆಯಲು ಅನುಮತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಬಿಲ್ ಸಂಖ್ಯೆ ಮತ್ತು ದಿನಾಂಕ | ವಿವರ | ಮೊತ್ತ ರೂ.ಗಳಲ್ಲಿ |
|---|---|---|---|
| 1. | 328875<br>24/01/2022 | ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಪ್ರಕಟಣೆಯ ಬಾಬ್ತು | 100=00 |
| 2 | 021<br>25/01/2022 | ಸ್ಕೈ ಸ್ಟುಡಿಯೋ, ಮೈಸೂರು ಇವರಿಂದ ಡಾ.ಬಿಆರ್.ಅಂಬೇಡ್ಕರ್ ರವರ ಭಾವಚಿತ್ರದ ಫೋಟೋ ಖರೀದಿಸಿ ಲ್ಯಾಮಿನೇಷನ್ ಮಾಡಿಸಿದ ಬಾಬ್ತು | 900=00 |
| 3 | MYSH21CSB100356<br>25/01/2022 | ಸಪ್ನ ಬುಕ್ ಹೌಸ್ ಪ್ರೈವೇಟ್ ಲಿಮಿಟೆಡ್, ಮೈಸೂರು ಇವರಿಂದ ಗಣರಾಜ್ಯೋತ್ಸವಕ್ಕೆ ಸಂಬಂಧಿಸಿದಂತೆ ವಿವಿಧ ಪುಸ್ತಕಗಳನ್ನು ಖರೀದಿಸಿದ ಬಾಬ್ತು | 1,155=00 |
| 4 | 6025<br>25/01/2022 | ಸ್ವೀಟ್ ಪ್ಯಾಲೇಸ್, ಬೇಕ್ ಅಂಡ್ ಕೂಲ್ ಮೈಸೂರು, ಇವರಿಂದ 1/2 ಕುಡಿಯುವ ನೀರಿನ ಬಾಟಲ್‌ಗಳನ್ನು ಖರೀದಿಸಿದ ಬಾಬ್ತು | 480=00 |
| 5 | 25/01/2022 | ಮೆ. ಸಾಗರ್ ಫ್ಲವರ್, ಮೈಸೂರು ಇವರಿಂದ ವಿವಿಧ ಹೂವುಗಳು ಮತ್ತು ಹಾರಗಳನ್ನು ಖರೀದಿಸಿದ ಬಾಬ್ತು | 1,200=00 |
| 6 | 583<br>25/01/2022 | ನಿಮಿಷಾಂಬ ಮೆಡಿಕಲ್ಸ್ ಅಂಡ್ ಜನರಲ್ ಸ್ಟೋರ್ಸ್, ಮೈಸೂರು ಇವರಿಂದ ಮಾಸ್ಕ್ ಮತ್ತು ಸ್ಯಾನಿಟೈಸರ್‌ಗಳನ್ನು ಖರೀದಿಸಿದ ಬಾಬ್ತು | 1,200=00 |
| 7 | 166<br>28/01/2022 | ಶ್ರೀ ಭೈರವ ಶ್ಯಾಮಿಯಾನ ಸೆಂಟರ್, ಮೈಸೂರು ಇವರಿಂದ ಶ್ಯಾಮಿಯಾನ ಹಾಗೂ ಇತ್ಯಾದಿಗಳನ್ನು ವ್ಯವಸ್ಥೆ ಮಾಡಿದ ಬಾಡಿಗೆ ಬಾಬ್ತು | 18,162=00 |
| 8 | 726<br>27/01/2022 | ಮಂಜು ಡಿಜಿಟಲ್ ಪೋಟೋ & ವೀಡಿಯೋ, ಮೈಸೂರು ಇವರಿಂದ ಛಾಯಾಚಿತ್ರವನ್ನು ತೆಗೆಸಿ ಹಾಗೂ ಆಲ್ಬಂ ನೀಡಿದ ಬಾಬ್ತು | 6,018=00 |
| 9. | 753<br>28/01/2022 | ಗುಣಶ್ರೀ ಎಂಟರ್‌ಪ್ರೈಸಸ್, ಮೈಸೂರು ರವರಿಂದ ಕ್ರಾಫರ್ಡ್ ಭವನದ ಮುಖ್ಯ ದ್ವಾರದ ಎರಡು ಕಡೆಗೆ ಫ್ಲೆಕ್ಸ್‌ಗಳನ್ನು ಅಳವಡಿಸಿರುವ ಬಾಬ್ತು | 9,938=00 |
| 10 | 03<br>31/01/2022 | ಎನ್.ಕೆ.ಬಿ. ಕೇಟರರ್ಸ್, ಮೈಸೂರು ಇವರಿಂದ 500 ಜನಕ್ಕೆ ಹಾಗೂ ಎನ್.ಸಿ.ಸಿ. ವಿದ್ಯಾರ್ಥಿಗಳಿಗೆ ತರಬೇತಿ ಸಮಯದಲ್ಲಿ ತಿಂಡಿ ವ್ಯವಸ್ಥೆಗೆ ಮಾಡಿದ ಬಾಬ್ತು | 47,700=00 |
| 11 | 31/01/2022 | ಸಿದ್ಧಪ್ಪಾಜಿ ಸೌಂಡ್ ಅಂಡ್ ಲೈಟಿಂಗ್, ಮೈಸೂರು ಇವರಿಂದ ಧ್ವನಿವರ್ಧಕ, ಇತ್ಯಾದಿಗಳ ವ್ಯವಸ್ಥೆ ಮಾಡಿದ ಬಾಡಿಗೆ ಬಾಬ್ತು | 7,600=00 |
| | | ಒಟ್ಟು ಮೊತ್ತ ರೂ.<br>(ತೊಂಬತ್ತಾಲ್ಕು ಸಾವಿರದ ನಾನೂರ ಐವತ್ಮೂರು ರೂಪಾಯಿಗಳು ಮಾತ್ರ) | 94,453=00 |

ತತ್ಸಂಬಂಧದ ವೆಚ್ಚವನ್ನು 2021-22ನೇ ಸಾಲಿನ – 'ಸಾಮಾನ್ಯ ಸಾಂಸ್ಕೃತಿಕ ಚಟುವಟಿಕೆಗಳು – 179'ರ ಶೀರ್ಷಿಕೆಯಿಂದ ಭರಿಸಲು ಸಹ ಆದೇಶಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವ

ಗೆ,

1) ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ (ವಿಭಾಗೀಯ) ಕಚೇರಿ, ಮೈಸೂರು ವಿಭಾಗ, ಮೈಸೂರು
3) ಕುಲಪತಿಗಳ/ ಕುಲಸಚಿವರ ಆಪ್ತ ಸಹಾಯಕರು, ಮೈ.ವಿ.ವಿ., ಮೈಸೂರು
4) ಕಚೇರಿ ಪ್ರತಿ/ ರಕ್ಷಾ ಕಡತ

UNIVERSITY OF MYSORE

**DIRECTORATE OF STUDENT WELFARE**

**Manasagangotri, Mysuru**

## REPORT

73rd Republic Day was celebrated in the premises of Crawford Hall on 26th January, 2022. Hon'ble Vice-Chancellor Prof.G.Hemanth Kumar. hoisted the National Flag. Guard of honour was given to the Hon'ble Vice-Chancellor by NCC Cadets of the university, which was followed by patriotic songs from the students of Maharaja's College, Yuvaraja's College, Fine Arts college & various PG Departments of the university. The University officers, teaching faculties, non-teaching staff, students, research scholars and others attended the programme.

ಜನವರಿ 26, 2022 ರಂದು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಆವರಣದಲ್ಲಿ 73ನೇ ಗಣರಾಜೋತ್ಸವ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಸನ್ಮಾನ್ಯ ಕುಲಪತಿಗಳಾದ ಪ್ರೊ. ಜಿ.ಹೇಮಂತ್ ಕುಮಾರ್ ಅವರು ಧ್ವಜಾರೋಹಣವನ್ನು ನೆರವೇರಿಸಿ, ಎನ್.ಸಿ.ಸಿ. ವಿದ್ಯಾರ್ಥಿಗಳಿಂದ ಗೌರವ ರಕ್ಷೆಯನ್ನು ಪಡೆದರು.

ನಂತರ ವಿಶ್ವವಿದ್ಯಾನಿಲಯದ ಅಂಗ ಕಾಲೇಜುಗಳಾದ ಮಹಾರಾಜ ಕಾಲೇಜು, ಯುವರಾಜ ಕಾಲೇಜು, ಲಲಿತ ಕಲೆಗಳ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತ ಗಾಯನವನ್ನು ಏರ್ಪಡಿಸಲಾಗಿತ್ತು. ಈ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಇತರರು ಭಾಗವಹಿಸಿದ್ದರು.

Director of Student Welfare
University of Mysore, Mysore









